ಮೂಡಿಬಂತು. ಈ ನಾಟಕ ಗದುಗಿನಲ್ಲಿ ಹವ್ಯಾಸಿ ಕಲಾವಿದರಿಂದ ಪ್ರದರ್ಶನಗೊಂಡಾಗ ಹೆಸರಾಂತ ನಾಟಕಕಾರ ನಲ್ವಡಿ ಶ್ರೀಕಂಠಶಾಸ್ತ್ರಿಗಳೂ ಹೂಗಾರರ ಪ್ರತಿಭೆಯನ್ನು ಕೊಂಡಾಡಿದರು. ಈ ನಾಟಕ ನೋಡಿದ ಸಿದ್ಧರಾಜ ದೊಡ್ಡವಾಡ ತಮ್ಮ ತಂಡಕ್ಕೂ ನಾಟಕ ಬರೆಯಲು ಕೇಳಿದರು.

ದೊಡ್ಡವಾಡರ ವೃತ್ತಿ ನಾಟಕ ಕಂಪನಿಗೆ ಬರೆದುಕೊಟ್ಟ ಮೊದಲ ನಾಟಕ 'ದಸರಾ'. ಹಳ್ಳಿ–ನಗರ ಜೀವನಕ್ಕೆ ಸಂಬಂಧಿಸಿದ ಈ ನಾಟಕ ಶುರುವಾಗುವುದು ದಸರಾ ಹಬ್ಬದಂದು. ಮುಕ್ತಾಯಗೊಳ್ಳುವುದೂ ದಸರಾ ಹಬ್ಬದಂದೇ. ಈ ಹೊಸ ಬಗೆಯ ಪ್ರಯೋಗ ಹೂಗಾರರಿಗೆ ಹೆಸರು ತಂದುಕೊಟ್ಟಿತು. ಸೊಗಸಾದ ಕತೆ, ಸರಳ–ಸಹಜ ಸಂಭಾಷಣೆ, ಮನಕರಗಿಸುವ ದೃಶ್ಯಗಳು, ನಗೆ ಉಕ್ಕಿಸುವ ಹಾಸ್ಯ ಸನ್ನಿವೇಶಗಳಿಂದ 'ದಸರಾ' ನಾಟಕ ಯಶಸ್ವಿಯಾಯಿತು.

ಮುಂದೆ ದೊಡ್ಡ ದೊಡ್ಡ ನಾಟಕ ಕಂಪನಿಗಳೂ ಇವರಿಂದ ಹೊಸ ನಾಟಕಗಳನ್ನು ಅಪೇಕ್ಷಿಸಲು ಆರಂಭಿಸಿದವು. ನಾಟಕಗಳ ರಚನೆ, ನಿರ್ದೇಶನ, ನಟನೆಯಲ್ಲಿ ಅವರು ತೊಡಗಿಕೊಂಡರು.

ಮುಂದಿನ ಎರಡು ದಶಕಗಳ ಕಾಲ ಹೂಗಾರರ ನಾಟಕ ಯುಗ. ಚಿತ್ತರಗಿ ಕುಮಾರ ವಿಜಯ ನಾಟ್ಯ ಸಂಘ, ಬಾದಾಮಿ ಸಂಗಮೇಶ್ವರ ನಾಟ್ಯ ಸಂಘ, ಗುಡಗೇರಿ ಕಂಪನಿ, ಗುಬ್ಬಿ ವೀರಣ್ಣನವರ ಕಂಪನಿಗಳಿಗೆಲ್ಲ ನಾಟಕಗಳನ್ನು ಬರೆದುಕೊಟ್ಟ ಹೂಗಾರರು ಬಹುತೇಕ ನಾಟಕಗಳನ್ನು ನಿರ್ದೇಶಿಸಿದರು.

ಸುಮಾರು 60 ನಾಟಕಗಳನ್ನು ಬರೆದ ಅವರ ಯಾವ ನಾಟಕದಲ್ಲೂ, ಯಾವ ಕತೆ, ಸಂಭಾಷಣೆಗಳಲ್ಲಿಯೂ ಪುನರಾವರ್ತನೆ ಕಂಡುಬರಲಿಲ್ಲ. ಒಂದಕ್ಕಿಂತ ಒಂದು ವಿಭಿನ್ನ ವಿಷಯಗಳನ್ನು ರಂಗದ ಮೇಲೆ ತಂದರು. 'ತಾಳ ತಪ್ಪಿದ ಬಾಳು', 'ಕೊಂಡು ತಂದ ಗಂಡ', 'ಸುವರ್ಣ', 'ಸುನಂದಾ ಪುತ್ಥಳಿ', 'ಗುರು ಕಾಣಿಕೆ', 'ಬೀಗರು ಹೊಕ್ಕಮನೆ', 'ಶಿರು ನೀಲಕಂಠ' ಹೀಗೆ ಯಶಸ್ವಿ ನಾಟಕಗಳನ್ನು ರಚಿಸಿದರು. ಸ್ತ್ರೀ ಪಾತ್ರಧಾರಿಯಾಗಿ ರಂಗಭೂಮಿಗೆ ಕಾಲಿಟ್ಟಿದ್ದ ಎಚ್.ಎನ್. ಹೂಗಾರರು ಮುಂದೆ ಹಾಸ್ಯ ಪಾತ್ರಗಳಲ್ಲೂ ನಟಿಸಿದರು. ಖಳನಾಯಕನಾಗಿಯೂ ಕಾಣಿಸಿಕೊಂಡರು.

ಸ್ನೇಹಿತರೊಂದಿಗೆ ಸ್ವಂತ ಕಂಪನಿಯನ್ನು ಸ್ಥಾಪಿಸಿದ ಹೂಗಾರರು ರಚಿಸಿದ ನಾಟಕಗಳು ಬೆಳ್ಳಿ ಪರದೆಯಲ್ಲೂ ಯಶಕಂಡವು. 'ಪಟ್ಟಣಕ್ಕೆ ಬಂದ ಪತ್ನಿಯರು' ಎಂಬ ಜನಪ್ರಿಯ ಚಿತ್ರ ಹೂಗಾರರ ಅಪಾರ ಯಶಸ್ಸು ಕಂಡ 'ತಾಳ ತಪ್ಪದ ಬಾಳು' ನಾಟಕವನ್ನು ಆಧರಿಸಿತ್ತು. ಹೂಗಾರರ ಹಲವು ನಾಟಕಗಳು ಚಲನಚಿತ್ರವಾಗಿ ನಿರ್ಮಾಣಗೊಂಡಿವೆ.

ಐತಿಹಾಸಿಕ ಚಿತ್ರ 'ಕಿತ್ತೂರು ಚೆನ್ನಮ್ಮ' ಚಿತ್ರಕ್ಕಾಗಿ ಸಂಭಾಷಣೆ ರಚಿಸಿದ್ದ ಹೂಗಾರರು 'ಗಾನಯೋಗಿ ಪಂಚಾಕ್ಷರಿ', 'ಗುಣನೋಡಿ ಹೆಣ್ಣು ಕೊಡು', 'ಪಾಲಿಗೆ ಬಂದಿದ್ದೇ ಪಂಚಾಮೃತ', 'ಕಣ್ಣು ತೆರೆಸಿದ ಹೆಣ್ಣು', 'ದೀಪಾವಳಿ' ಮೊದಲಾದ ಚಿತ್ರಗಳಿಗೆ ಕೆಲಸ ಮಾಡುವುದರ ಜೊತೆಗೆ ಕೆಲವು ಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

ಅವರು ರಚಿಸಿದ ಅನೇಕ ನಾಟಕಗಳು ಶತದಿನೋತ್ಸವ ಕಂಡಿವೆ. ನಟ ನಿರ್ದೇಶಕ ಎಚ್.ಎನ್. ಹೂಗಾರರನ್ನು ಹುಡುಕಿಕೊಂಡು ಬಂದ ಪ್ರಶಸ್ತಿ ಪುರಸ್ಕಾರಗಳು ಹತ್ತಾರು. ಕರ್ನಾಟಕ ರಾಜ್ಯೋತ್ಸವ, ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ ಪುರಸ್ಕೃತರಾದ ಹೂಗಾರರು ನಾಟಕ ಅಕಾಡಮಿ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಹೂ ಮಾರುತ್ತಿದ್ದ ಹೂಗಾರರ ಬದುಕು ಹೂವಿನ ಹಾದಿಯಲ್ಲಿ ಸಾಗಿದ್ದು ಕೆಲ ಕಾಲ ಮಾತ್ರ. ಆದರೆ ಅವರು ಸವೆಸಿದ್ದು ಮುಳ್ಳಿನ ಹಾದಿಯನ್ನೇ...